**ದಿನಾಂಕಃ 17.10.2025.**
**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**.

ಮುಖ್ಯ ವಿಚಾರಣೆಃ 8ನೇ ಪ್ರತಿವಾದಿ ಪರ ಶ್ರೀ ಎ ಎ ಕೆ ವಕೀಲರಿಂದಃ

ನಾನು ಈ ದಾವೆಯಲ್ಲಿ ನಾನು ಪ್ರತಿವಾದಿ ನಂಬರ 8 ರವರಿಂದ ವಿಶೇಷ ಮುಕ್ತಿಯಾರ ಅಧಿಕಾರವನ್ನು ಪಡೆದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಬದಲಿಗೆ ಅಫಿಡೆವಿಟನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲ ವಿಚಾರಗಳು ಸತ್ಯವಾಗಿರುತ್ತವೆ. ಓದಿ ನೋಡಿ ಸಹಿ ಮಾಡಿದ್ದೇನೆ.

ವಿಶೇಷ ಮುಕ್ತಿಯಾರ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಡಿ 1 ಎಂದು, 03.07.1995 ರ ಖರೀದಿ ಪತ್ರದ ದೃಡಿಕೃತ ನಕಲು (ಮೂಲ ಕ್ರಯ ಪತ್ರ ಕಳೆದುಹೋಗಿರುತ್ತದೆ) ಹಾಜರುಪಡಿಸಿದ್ದು ಅದನ್ನು ನಿಶಾನೆ ಡಿ 2 ಎಂದು, ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಡಿ 3 ಎಂದು, 1 ಮ್ಯುಟೇಶನ ಎಂಟ್ರಿಯನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಡಿ 4 ಎಂದು, ಆರ್ ಎ ಸಂಖ್ಯೆ 16/2018 ರಲ್ಲಿಯ ಉಪವಿಭಾಗಾಧಿಕಾರಿ ರವರ ಆದೇಶದ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಡಿ 5 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಯುಕೆಆರ್ ವಕೀಲರಿಂದಃ**

ದಾವಾ ಆಸ್ತಿ ಸರ್ವೇ ಸಂಖ್ಯೆ 131/2ಬ+1ಕ+2/2 ಆಗಿರುತ್ತದೆ. ಸದರಿ ಆಸ್ತಿಯ ಒಟ್ಟು ಕ್ಷೇತ್ರ 04 ಎಕರೆ 25 ಗುಂಟೆ ಆಗಿರುತ್ತದೆ. ಪ್ರತಿವಾದಿ ನಂಬರ 8 ರವರ ತಂದೆಯ ಹೆಸರು ಮಲ್ಲಸರ್ಜ ಬಸ್ಸಪ್ಪ ಹುಣಶಿಕಟ್ಟಿ ಆಗಿರತ್ತುದೆ. ಸದರಿಯವರು ದಿನಾಂಕ 03.07.1995 ರಂದು ವಾದಿ ಹಾಗೂ ಪ್ರತಿವಾದಿ ನಂಬರ 1 ರಿಂದ 7 ರವರಿಂದ ಹಾಗೂ ಅವರ ಪೂರ್ವಜ್ಜರ ಕಡೆಯಿಂದ ದಾವಾ ಆಸ್ತಿಯ ಪೈಕಿ 01 ಎಕರೆ 25 ಗುಂಟೆಯನ್ನು ಖರೀದಿ ಮಾಡಿರುತ್ತಾರೆ. ಖರೀದಿ ಪತ್ರದ ಮೂಲ ಪ್ರತಿ ಕಳೆದದುಹೋಗಿದ್ದರಿಂದ ಅದರ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿ 01 ಎಕರೆ 25 ಗುಂಟೆ ಆಸ್ತಿಯ ಸಾಗುವಳಿಯನ್ನು 8 ನೇ ಪ್ರತಿವಾದಿ ಹಾಗೂ ಅವರ ಸಹೋದರಿಯರು ಮತ್ತು ಅವರ ತಾಯಿ ಹೊಂದಿರುತ್ತಾರೆ. ಉಳಿದ 03 ಎಕರೆ ಆಸ್ತಿಯನ್ನು ವಾದಿ ಮತ್ತು ಪ್ರತಿವಾದಿ ನಂಬರ 1 ರಿಂದ 7 ರವರು ಕಬ್ಜಾ ವಹಿವಾಟನ್ನು ಹೊಂದಿರುತ್ತಾರೆ.

**2. 01** ಎಕರೆ **25** ಗುಂಟೆಯ ಜಮೀನಿನ ಪೂರ್ವಕ್ಕೆ ಇದೇ ಸದರಿ ಸರ್ವೇ ಸಂಖ್ಯೆ ಜಮೀನಿನ **03** ಎಕರೆ ಉಳಿದ ಜಮೀನು ಇರುತ್ತದೆ, ಪಶ್ಚಿಮಕ್ಕೆ ಗಿರಣಿಯವರ @ ಬೇಟಗೇರಿ ರವರ ಜಮೀನು, ಉತ್ತರಕ್ಕೆ ಮಲ್ಲನಗೌಡ ಪಾಟೀಲ ರವರ ಜಮೀನು ಹಾಗೂ ದಕ್ಷಿಣಕ್ಕೆ ಗೌಡರ ಜಮೀನು ಇರುತ್ತದೆ.

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ. ದಂ. ನ್ಯಾ. ಬೈಲಹೊಂಗಲ